ದಿನಾಂಕಃ 31-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>- 1 ರಿಂದ 5 ನೇ ಪ್ರತಿವಾದಿ ಪರವಾಗಿ ಶ್ರೀ. ಎಸ್.ಆರ್.ಎ. ವಕೀಲರಿಂದಃ-**

ನಾನು ವ್ಯವಸಾಯ ಮಾಡುತ್ತೇನೆ. ಪ್ರತಿವಾದಿಯರು ನನಗೆ ಕಳೆದ 3 ವರ್ಷಗಳಿಂದ ಪರಿಚಯಸ್ಥರು. ನಾನು ಜಮೀನನ್ನು ಖರೀದಿಸಲು ಈ ಕಡೆ ಬಂದ ಸಮಯದಲ್ಲಿ ಜಮೀನುಗಳ ದಲ್ಲಾಳಿಗಳ ಮೂಲಕ ಪ್ರತಿವಾದಿಯರ ಪರಿಚಯವಾಗಿರುತ್ತದೆ. ಆ ದಲ್ಲಾಳಿ ಐ.ಡಿ.ಹಳ್ಳಿ ಗ್ರಾಮದ ನಾಗೀರೆಡ್ಡಿ ಎಂಬುವವರಾಗಿರುತ್ತಾರೆ. ನಾಗೀರೆಡ್ಡಿರವರು ನನಗೆ ಈ ಇಬ್ಬರು ವ್ಯಕ್ತಿಗಳನ್ನು ಮಾತ್ರ ಪರಿಚಯ ಮಾಡಿಸಿರುತ್ತಾರೆ. ಹಳೇಇಟಕಲೋಟಿ ಗ್ರಾಮದ ಜನರು ಪ್ರತಿವಾದಿಯರು ಜಮೀನನ್ನು ಮಾರಾಟ ಮಾಡುತ್ತಾರೆ ಎಂಬ ವಿಚಾರವನ್ನು ನನಗೆ ತಿಳಿಸಿದರು. ಆ ಜನರ ಹೆಸರು ನನಗೆ ಗೊತ್ತಿಲ್ಲ. ಆ ವ್ಯಕ್ತಿಯನ್ನು ಪ್ರೇಮ್ ಕುಮಾರ್ ಎಂಬುವವರು ನನಗೆ ಪರಿಚಯ ಮಾಡಿದರು. ದಾವಾ ಆಸ್ತಿಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ನಾಗೀರೆಡ್ಡಿರವರು ನನಗೆ ಕೊಟ್ಟರು. ಕ್ರಯದ ಕರಾರು ಪತ್ರ ಮಾಡಿಕೊಳ್ಳುವುದಕ್ಕಿಂತ ಒಂದು ವಾರ ಮೊದಲು ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ನನಗೆ ಕೊಟ್ಟರು. ಅವರು ದಾವಾ ಆಸ್ತಿಗಳನ್ನು ಖರೀದಿಸಿದ ಬಗ್ಗೆ ಕ್ರಯ ಪತ್ರವನ್ನು ನನಗೆ ಕೊಟ್ಟರು. ಆ ಕ್ರಯ ಪತ್ರವನ್ನು ನಾನು ನೋಡಿರುವುದಿಲ್ಲ ನಾಗೀರೆಡ್ಡಿರವರೇ ನೋಡಿದ್ದರು. ದಾವಾ ಆಸ್ತಿಗೆ ಸಂಬಂಧಪಟ್ಟ ಯಾವುದೇ

ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಈ ಜಮೀನಿಗೆ ಸಂಬಂಧಪಟ್ಟ ಎಲ್ಲಾ ವ್ಯವಹಾರಗಳನ್ನು ನಾನು ಮಾಡಿರುವುದಿಲ್ಲ, ಬದಲಾಗಿ ನಾಗೀರೆಡ್ಡಿರವರೇ ಮಾಡಿರುತ್ತಾರೆ. ನಾಗೀರೆಡ್ಡಿರವರು ಆ ವ್ಯವಹಾರವನ್ನು ಯಾರ ಸಮ್ಮುಖದಲ್ಲಿ ಮತ್ತು ಎಲ್ಲಿ ಮಾಡಿದರು ಎಂಬ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಆ ವ್ಯವಹಾರ ಮಾಡುವ ಸಮಯದಲ್ಲಿ ಯಾರು ಯಾರು ಹಾಜರಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ